ಹುಸೇನಪ್ಪ ನಾಯಕ ಅಕಾಡೆಮಿ

Video - 2

KAS | PSI | PDO | VAO | FDA | SDA | HSTR | GPSTR | CTI | PC

ಪ್ರಚಲಿತ ಘಟನೆಗಳು - 2024

MCQ Questions

22-08-2024 @ 6PM

ಪ್ರಚಲಿತ ಘಟನೆಗಳು – 2024

1. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ ?

ಎ) 2024 ಜುಲೈ 15 ರಂದು ಭಾರತೀಯ ವಿದೇಶಾಂಗ ಸೇವೆಯ ಹಿರಿಯ ಅಧಿಕಾರಿ ಮಾನ್ಯ ವಿಕ್ರಮ್ ಮಿಸ್ರಿರವರು ಭಾರತದ 35ನೇ ವಿದೇಶಾಂಗ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸಿದರು.

ಬಿ) ಭಾರತೀಯ ವಿದೇಶಾಂಗ ಸೇವೆಯ ಅತ್ಯುನ್ನತ ಹುದ್ದೆ ವಿದೇಶಾಂಗ ಕಾರ್ಯದರ್ಶಿ ಹುದ್ದೆಯಾಗಿದೆ.

ಸಿ) ಭಾರತದ 34ನೇ ವಿದೇಶಾಂಗ ಕಾರ್ಯದರ್ಶಿಯಾಗಿ ವಿನಯ್ ಮೋಹನ್ ಕ್ವಾತ್ರಾರವರು ಕರ್ತವ್ಯ ನಿರ್ವಹಿಸಿದ್ದಾರೆ.

ಡಿ) ಪ್ರಸ್ತುತ ಭಾರತದ ವಿದೇಶಾಂಗ ಸಚಿವರಾಗಿ ರಾಜನಾಥ್ ಸಿಂಗ್‌ರವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಪ್ರಸ್ತುತ ಭಾರತದ ವಿದೇಶಾಂಗ ಸಚಿವರು – ಎಸ್ ಜೈ ಶಂಕರ್

2. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ ?

ಎ) 2022ರ 5ನೇ ಆವೃತ್ತಿಯ ಪ್ರಕಾರ ಭಾರತವು ಒಟ್ಟು 3,682 ಹುಲಿಗಳನ್ನು ಹೊಂದಿದೆ.

ಬಿ) 2022ರ ವರದಿಯ ಪ್ರಕಾರ ಭಾರತದಲ್ಲಿ ಮಧ್ಯಪ್ರದೇಶ ರಾಜ್ಯವು ಅತಿ ಹೆಚ್ಚು ಹುಲಿಗಳನ್ನು (785 ಹುಲಿಗಳು) ಹೊಂದಿದ ಮೊದಲ ರಾಜ್ಯವಾಗಿದೆ. ನಂತರ ಕರ್ನಾಟಕ ಎರಡನೇ ಸ್ಥಾನದಲ್ಲಿದೆ (563 ಹುಲಿಗಳು) ಮತ್ತು ಉತ್ತರಾಖಂಡ್ ರಾಜ್ಯ (560 ಹುಲಿಗಳು) ಮೂರನೇ ಸ್ಥಾನದಲ್ಲಿದೆ.

ಸಿ) ಅಂತಾರಾಷ್ಟ್ರೀಯ ಹುಲಿ ದಿನವನ್ನು ಜೂನ್ 29ರಂದು ಆಚರಿಸಲಾಗುತ್ತದೆ.

ಡಿ) ಚಾಮರಾಜನಗರ ಜಿಲ್ಲೆಯ ಬಂಡಿಪುರದಲ್ಲಿ ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು ಹುಲಿಗಳು ಇವೆ.

ಅಂತಾರಾಷ್ಟ್ರೀಯ ಹುಲಿ ದಿನ – ಜುಲೈ 29

3. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024–25ರ ಕೇಂದ್ರದ ಪೂರ್ಣ ಪ್ರಮಾಣದ ಬಜೆಟ್ ಅನ್ನು ಕೇಂದ್ರದ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್‌ರವರು 2024 ಜುಲೈ 23 ರಂದು ಲೋಕಸಭೆಯಲ್ಲಿ ಮಂಡಿಸಿದರು.

2) 2024–25ರ ಕೇಂದ್ರದ ಪೂರ್ಣ ಪ್ರಮಾಣದ ಬಜೆಟ್‌ನ ಗಾತ್ರ ₹ 48.21 ಲಕ್ಷ ಕೋಟಿ ರೂ.

3) 2024–25ರ ಕೇಂದ್ರದ ಪೂರ್ಣ ಪ್ರಮಾಣದ ಬಜೆಟ್ ಮಹಿಳೆಯರು, ಬಡವರು, ಯುವಕರು ಮತ್ತು ರೈತರನ್ನು ಕೇಂದ್ರೀಕರಿಸಿಕೊಂಡು ರೂಪಿಸಲಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ.

ಸಿ) 1 ಮತ್ತು 2 ಸರಿಯಾಗಿವೆ. **ಡಿ) 1, 2 ಮತ್ತು 3 ಸರಿಯಾಗಿವೆ.**

4. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2023-24ರ ಭಾರತದ ಸುಸ್ಥಿರ ಅಭಿವೃದ್ಧಿ ಸೂಚ್ಯಂಕದ ಪಟ್ಟಿಯನ್ನು 2024 ಜುಲೈ 12 ರಂದು ನೀತಿ ಆಯೋಗದ ಉಪಾಧ್ಯಕ್ಷರಾದ ಸುಮನ್ ಕೆ. ಬೆರಿರವರು ಬಿಡುಗಡೆ ಮಾಡಿದರು.

2) 2023-24ರ ಸೂಚ್ಯಂಕದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳ ಒಟ್ಟಾರೆ ಸಾಧನೆಯಲ್ಲಿ ಭಾರತದ ಸೂಚ್ಯಂಕ 66 ಆಗಿರುತ್ತದೆ.

3) 2023-24ರ ಭಾರತದ ಸುಸ್ಥಿರ ಅಭಿವೃದ್ಧಿ ಸೂಚ್ಯಂಕದ ಪಟ್ಟಿಯಲ್ಲಿ ಉತ್ತರಾಖಂಡ್ ರಾಜ್ಯ ಮತ್ತು ಕೇರಳ ರಾಜ್ಯ 79 ಅಂಕಗಳನ್ನು ಪಡೆಯುವುದರ ಮೂಲಕ ಮೊದಲ ಸ್ಥಾನದಲ್ಲಿವೆ. ಕರ್ನಾಟಕ ಈ ಪಟ್ಟಿಯಲ್ಲಿ 75 ಅಂಕಗಳನ್ನು ಪಡೆಯುವುದರ ಮೂಲಕ 5ನೇ ಸ್ಥಾನದಲ್ಲಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ.
ಸಿ) 1 ಮತ್ತು 3 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

2023-24ರ ಸೂಚ್ಯಂಕದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳ ಒಟ್ಟಾರೆ ಸಾಧನೆಯಲ್ಲಿ ಭಾರತದ ಸೂಚ್ಯಂಕ 71 ಆಗಿರುತ್ತದೆ.



5. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) ಕೇಂದ್ರದ 33ನೇ ಸಂಪುಟ ಕಾರ್ಯದರ್ಶಿಯಾಗಿ 2024 ಆಗಸ್ಟ್ 10 ರಂದು ತಮಿಳುನಾಡು ರಾಜ್ಯದ ಐಡರ್‌ನ 1987ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ಟಿ.ವಿ ಸೋಮನಾಥನ್‌ರವರು ನೇಮಕವಾದರು. ಇವರು ಪ್ರಸ್ತುತ ಕೇಂದ್ರದ ಹಣಕಾಸು ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದು 2024 ಆಗಸ್ಟ್ 31 ರಂದು ಕೇಂದ್ರದ ಸಂಪುಟ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸುತ್ತಾರೆ.

2) ಕೇಂದ್ರದ ಕ್ಯಾಬಿನೆಟ್ ಕಾರ್ಯದರ್ಶಿ ಹುದ್ದೆ ಭಾರತದ ಐಎಎಸ್ ಅಧಿಕಾರಿಗಳಲ್ಲಿ ಅತಿ ದೊಡ್ಡ ಹುದ್ದೆಯಾಗಿದೆ.

3) ರಾಜೀವ್ ಕುಮಾರ್‌ರವರು ಭಾರತದ 32ನೇ ಸಂಪುಟ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದು 2024 ಆಗಸ್ಟ್ 30 ರಂದು ನಿವೃತ್ತಿಯಾಗಲಿದ್ದಾರೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 1 ಮತ್ತು 2 ಸರಿಯಾಗಿವೆ.

ಸಿ) 1 ಮತ್ತು 3 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

ಭಾರತದ 32ನೇ ಸಂಪುಟ ಕಾರ್ಯದರ್ಶಿ – ರಾಜೀವ್ ಗೌಬಾ

6. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿ 2006ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಪಡೆದ ಮೊಹಮ್ಮದ್ ಯೂನಸ್‌ರವರು ಬಾಂಗ್ಲಾದೇಶದ ಅಧ್ಯಕ್ಷರಾದ ಮೊಹಮ್ಮದ್ ಶಹಾಬುದ್ದೀನ್‌ರವರಿಂದ 2024 ಆಗಸ್ಟ್ 8 ರಂದು ಪ್ರಮಾಣ ವಚನ ಸ್ವೀಕರಿಸಿದರು.

2) ಶೇಖ್ ಹಸೀನಾರವರು ಬಾಂಗ್ಲಾದೇಶದ ಮಾಜಿ ಪ್ರಧಾನ ಮಂತ್ರಿಗಳು.

3) ಬಾಂಗ್ಲಾದೇಶದಲ್ಲಿ ಮೀಸಲಾತಿ ನೀತಿ ವಿರೋಧಿಸಿ ಹಿಂಸಚಾರ ನಡೆದಿತ್ತು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 1 ಮತ್ತು 2 ಸರಿಯಾಗಿವೆ.

ಸಿ) 1 ಮತ್ತು 3 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

7. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024 ಜುಲೈ 26 ರಿಂದ ಆಗಸ್ಟ್ 11ರವರೆಗೆ ಫ್ರಾನ್ಸ್ ದೇಶದ ರಾಜಧಾನಿಯಾದ ಪ್ಯಾರಿಸ್‌ನಲ್ಲಿ 33ನೇ ಒಲಿಂಪಿಕ್ಸ್ ಕ್ರೀಡಾಕೂಟಗಳು ನಡೆದವು.

2) 2024ರ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದ ಪದಕಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಅಮೆರಿಕ, ಎರಡನೇ ಸ್ಥಾನದಲ್ಲಿ ಚೀನಾ, ಮೂರನೇ ಸ್ಥಾನದಲ್ಲಿ ಜಪಾನ್, ನಾಲ್ಕನೇ ಸ್ಥಾನದಲ್ಲಿ ಆಸ್ಟ್ರೇಲಿಯಾ ಮತ್ತು 69ನೇ ಸ್ಥಾನದಲ್ಲಿ ಭಾರತವಿದೆ.

3) 2024ರ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತ ಒಂದು ಬೆಳ್ಳಿಯ ಪದಕ ಮತ್ತು ಐದು ಕಂಚಿನ ಪದಕಗಳನ್ನು ಪಡೆದಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿವೆ.

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1 ಮತ್ತು 3 ಸರಿಯಾಗಿವೆ.

2024ರ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದ ಪದಕಗಳ ಪಟ್ಟಿಯಲ್ಲಿ ಭಾರತ ಪದಕಗಳ ಪಟ್ಟಿಯಲ್ಲಿ 71ನೇ ಸ್ಥಾನದಲ್ಲಿದೆ.

1. KARNATAKA BUDGET 2024-25 By Santhosh H R
https://dhronacharyaacademy.com/courses/sbv/
2. INDIAN ECONOMY DSERT BOOKS 8,9,10, PUC I PUC II By Mohammed Taslim
https://dhronacharyaacademy.com/general-economics-1/

8. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ನೀರಜ್ ಚೋಪ್ರಾ	I. ಶೂಟಿಂಗ್
ಬಿ) ಮನು ಭಾಕರ್	II. ಜಾವೇಲಿನ್
ಸಿ) ವಿನೇಶ್ ಫೋಗಾಟ್	III. ಹಾಕಿ
ಡಿ) ಪಿ.ಆರ್ ಶ್ರೀಜೇಶ್	IV. ಕುಸ್ತಿ

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)
ಬಿ) (II) (I) (IV) (III)
ಸಿ) (IV) (II) (III) (I)
ಡಿ) (III) (I) (IV) (II)

9. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024 ಜುಲೈ 15ರಂದು ನೇಪಾಳ ದೇಶದ ಪ್ರಧಾನ ಮಂತ್ರಿಯಾಗಿ ಕೆ.ಪಿ ಶರ್ಮಾ ಓಲಿರವರು 3ನೇ ಬಾರಿಗೆ ಪ್ರಮಾಣ ವಚನ ಸ್ವೀಕರಿಸಿದರು.

2) ಪ್ರಸ್ತುತ ನೇಪಾಳ ದೇಶದ ಅಧ್ಯಕ್ಷರಾಗಿ ರಾಮಚಂದ್ರ ಪೌಡೆನ್‌ರವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

3) ಸಾರ್ಕ್‌ನ ಕೇಂದ್ರ ಕಚೇರಿ ನೇಪಾಳ ದೇಶದ ರಾಜಧಾನಿ ಕಠ್ಮಂಡು ಎಂಬ ನಗರದಲ್ಲಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿವೆ.

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

10. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ ?

ಎ) ಇತ್ತೀಚೆಗೆ ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರಾದ ಮನೋಜ್ ಸೋನಿರವರು ವೈಯಕ್ತಿಕ ಕಾರಣ ನೀಡಿ ರಾಜೀನಾಮೆ ನೀಡಿದ್ದರು ಆದ್ದರಿಂದ ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರ ಸ್ಥಾನ ಖಾಲಿಯಾಗಿದೆ.

ಬಿ) 2024 ಆಗಸ್ಟ್ 1 ರಂದು ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರಾಗಿ ಆಂಧ್ರಪ್ರದೇಶ ರಾಜ್ಯದ ಕೇಡರ್‌ನ 1983ನೇ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಪ್ರೀತಿ ಸೂದನ್‌ರವರು ಅಧಿಕಾರ ಸ್ವೀಕರಿಸಿದರು.

ಸಿ) ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರನ್ನು ಮಾನ್ಯ ರಾಷ್ಟ್ರಪತಿಯವರು ನೇಮಕ ಮಾಡುತ್ತಾರೆ.

ಡಿ) ಸಂವಿಧಾನದ 312ನೇ ಕೇಂದ್ರ ಲೋಕಸೇವಾ ಆಯೋಗದ ರಚನೆಗೆ ಸಂಬಂಧಿಸಿದೆ.

11. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ಶಾಲಿನಿ ರಜನೀಶ್‌ರವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

2) ಕರ್ನಾಟಕ ರಾಜ್ಯ ಸರ್ಕಾರದ ಮಹಿಳಾ ಮುಖ್ಯ ಕಾರ್ಯದರ್ಶಿಗಳಾಗಿ ಥೆರೆಸಾ ಭಟ್ಟಾಚಾರ್ಯ, ಡಾ॥ ಮಾಲತಿ ದಾಸ್, ಕೆ. ರತ್ನಪ್ರಭಾ, ವಂದಿತಾ ಶರ್ಮಾರವರು ಕರ್ತವ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಶಾಲಿನಿ ರಜನೀಶ್‌ರವರು 5ನೇ ಮಹಿಳಾ ಮುಖ್ಯ ಕಾರ್ಯದರ್ಶಿಯಾಗಿ ಕರ್ತವ್ಯನಿರ್ವಹಿಸುತ್ತಿದ್ದಾರೆ.

3) 2024 ಜುಲೈ 31ರಂದು ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದ ರಜನೀಶ್ ಗೋಯಲ್‌ರವರು ನಿವೃತ್ತಿಯಾದರು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 3 ಮಾತ್ರ ಸರಿಯಾಗಿವೆ.

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

12. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) ಭಾರತದ ಭೂ ಸೇನಾ ಮುಖ್ಯಸ್ಥರಾಗಿ 2024 ಜೂನ್ 30 ರಂದು ಜನರಲ್ ಉಪೇಂದ್ರ ದ್ವಿವೇದಿರವರು ಅಧಿಕಾರ ಸ್ವೀಕರಿಸಿದರು.

2) 2024 ಆಗಸ್ಟ್ 28 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಹೊಸ ಅಧ್ಯಕ್ಷರಾಗಿ ಚೆಲ್ಲಾ ಶ್ರೀನಿವಾಸುಲು ಶೆಟ್ಟಿ ಅಧಿಕಾರ ಸ್ವೀಕರಿಸಿದ್ದಾರೆ.

3) ಕರ್ನಾಟಕ ರಾಜ್ಯದ ಚುನಾವಣಾ ಆಯುಕ್ತರಾಗಿ ಜಿ.ಎಸ್ ಸಂಗ್ರೇಶಿರವರು ನೇಮಕವಾಗಿದ್ದಾರೆ

4. 2024 ಜೂನ್ 30 ರಿಂದ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ 3ನೇ ಬಾರಿಗೆ ಅಜಿತ್ ದೋವಾಲ್‌ರವರು ನೇಮಕವಾಗಿದ್ದಾರೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮತ್ತು 2 ಸರಿಯಾಗಿವೆ

ಬಿ) 2 ಮಾತ್ರ ಸರಿಯಾಗಿವೆ.

ಸಿ) 1 ಮತ್ತು 3 ಸರಿಯಾಗಿವೆ.

ಡಿ) 1, 2, 3 ಮತ್ತು 4 ಸರಿಯಾಗಿವೆ.

13. ಈ ಕೆಳಗಿನ ನ್ಯಾಟೋ ಸಂಘಟನೆಗೆ ಸಂಬಂಧಿಸಿದಂತೆ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ ?

ಎ) ನ್ಯಾಟೋ ಸಂಘಟನೆಯ ಹೊಸ ಅಧ್ಯಕ್ಷರಾಗಿ ಮಾರ್ಕ್ ರುಟ್ಟೆರವರು ಆಯ್ಕೆಯಾಗಿದ್ದಾರೆ.

ಬಿ) ನ್ಯಾಟೋ ಸಂಘಟನೆ 1949 ಏಪ್ರೀಲ್ 4 ರಂದು ಸ್ಥಾಪನೆಯಾಗಿದ್ದು ಇದರ ಕೇಂದ್ರ ಕಚೇರಿ ಬೆಲ್ಜಿಯಂ ದೇಶದ ಬ್ರುಸೇಲ್ಸ್‌ನಲ್ಲಿದೆ.

ಸಿ) ಪ್ರಸ್ತುತ ನ್ಯಾಟೋದ ಸದಸ್ಯ ರಾಷ್ಟ್ರಗಳು 32

ಡಿ) ನ್ಯಾಟೋದ 32ನೇ ಸದಸ್ಯ ರಾಷ್ಟ್ರವಾಗಿ ಫಿನ್‌ಲ್ಯಾಂಡ್ ದೇಶವು ಸೇರಿದೆ

ನ್ಯಾಟೋದ 32ನೇ ಸದಸ್ಯ ರಾಷ್ಟ್ರ – ಸ್ವೀಡನ್ (2024 ಮಾರ್ಚ್ 7)

14. ಈ ಕೆಳಗಿನ ಪ್ರಮುಖ ಸೂಚ್ಯಂಕಗಳಿಗೆ ಸಂಬಂಧಿಸಿದಂತೆ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ ?

ಎ) 2024ರ ಜಾಗತಿಕ ಲಿಂಗ ಅಂತರ ಸೂಚ್ಯಂಕದ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಐಸ್‌ಲ್ಯಾಂಡ್ ದೇಶವಿದೆ ಮತ್ತು 129ನೇ ಸ್ಥಾನದಲ್ಲಿ ಭಾರತ ದೇಶವಿದೆ.

ಬಿ) 2024ರ ಜಾಗತಿಕ ಶಕ್ತಿ ಪರಿವರ್ತನೆ ಸೂಚ್ಯಂಕದ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಸ್ವೀಡನ್ ದೇಶವಿದೆ ಮತ್ತು 63ನೇ ಸ್ಥಾನದಲ್ಲಿ ಭಾರತ ದೇಶವಿದೆ.

ಸಿ) 2023–24ನೇ ಸಾಲಿನ ಮಾನವ ಅಭಿವೃದ್ಧಿ ಸೂಚ್ಯಂಕದ ಪಟ್ಟಿಯಲ್ಲಿ ಭಾರತ 134ನೇ ಸ್ಥಾನದಲ್ಲಿದೆ.

ಡಿ) 2024ರ ಜಾಗತಿಕ ನಗರ ಸೂಚ್ಯಂಕದ ಪಟ್ಟಿಯಲ್ಲಿ ದೆಹಲಿ 450ನೇ ಸ್ಥಾನದಲ್ಲಿದೆ.

2024ರ ಜಾಗತಿಕ ನಗರ ಸೂಚ್ಯಂಕದ ಪಟ್ಟಿಯಲ್ಲಿ ದೆಹಲಿ 350ನೇ ಸ್ಥಾನದಲ್ಲಿದೆ.

15. ಈ ಕೆಳಕಂಡ ಯಾವ ಜೋಡಣೆ ತಪ್ಪಾಗಿದೆ ?

ಎ) 18ನೇ ಲೋಕಸಭೆಯ ಹಂಗಾಮಿ ಸ್ಪೀಕರ್ – ಭರ್ತೃಹರಿ ಮಹತಾಬ್

ಬಿ) ಪ್ರಸ್ತುತ ರಾಜ್ಯಸಭೆಯ ನಾಯಕರು – ಜೆ.ಪಿ ನಡ್ಡಾ

ಸಿ) ಪ್ರಸ್ತುತ ಲೋಕಸಭೆಯ ವಿರೋಧ ಪಕ್ಷದ ನಾಯಕರು – ರಾಹುಲ್ ಗಾಂಧಿ

ಡಿ) ಒಡಿಶಾ ರಾಜ್ಯದ ಮುಖ್ಯಮಂತ್ರಿ – ಪೆಮಾ ಖಂಡು

ಒಡಿಶಾ ರಾಜ್ಯದ ಮುಖ್ಯಮಂತ್ರಿ – ಮೋಹನ್ ಚರಣ್ ಮಾಂಝಿ

16. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ಒಡಿಶಾದ ಮುಖ್ಯಮಂತ್ರಿ	I. ಪೆಮಾ ಖಂಡು
ಬಿ) ಅರುಣಾಚಲ ಪ್ರದೇಶದ ಮುಖ್ಯಮಂತ್ರಿ	II. ಪ್ರೇಮ್ ಸಿಂಗ್ ತಮಾಂಗ್
ಸಿ) ಸಿಕ್ಕಿಂ ಮುಖ್ಯಮಂತ್ರಿ	III. ಮೋಹನ್ ಚರಣ್ ಮಾಂಝಿ
ಡಿ) ಆಂಧ್ರಪ್ರದೇಶದ ಮುಖ್ಯಮಂತ್ರಿ	IV. ಎನ್ ಚಂದ್ರಬಾಬು ನಾಯ್ಡು

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)
ಬಿ) (II) (I) (IV) (III)
ಸಿ) (IV) (II) (III) (I)
ಡಿ) (III) (I) (II) (IV)

17. ಈ ಕೆಳಕಂಡ ಯಾವ ಜೋಡಣೆ ತಪ್ಪಾಗಿದೆ ?

ಎ) 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ – ಮಂಡ್ಯ

ಬಿ) ಬಿಮೆಕ್ಸ್ ಜಂಟಿ ನೌಕಾ ಸಮರಾಭ್ಯಾಸ್ – ಜಪಾನ್ ಮತ್ತು ಭಾರತ

ಸಿ) ಜಿಎಸ್‌ಟಿ ಮಂಡಳಿಯ ಅಧ್ಯಕ್ಷರು – ಕೇಂದ್ರ ಗೃಹ ಸಚಿವರು

ಡಿ) ಪಂಡಿತ್ ರಾಜೀವ್ ತಾರನಾಥ್ – ಸರೋದ್ ವಾದಕರು

ಜಿಎಸ್‌ಟಿ ಮಂಡಳಿಯ ಅಧ್ಯಕ್ಷರು – ಕೇಂದ್ರ ಹಣಕಾಸು ಸಚಿವರು

18. ಜಿ-7 ರಾಷ್ಟ್ರಗಳ ಶೃಂಗ ಸಭೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ.

ಎ) 2024 ಜೂನ್ 13 ರಿಂದ 15ರವರೆಗೆ ಜಿ-7 ರಾಷ್ಟ್ರಗಳ 50ನೇ ಶೃಂಗಸಭೆ ಇಟಲಿ ದೇಶದ ಅಪುಲಿಯಾದಲ್ಲಿ ನಡೆಯಿತು.

ಬಿ) ಜಿ-7 ರಾಷ್ಟ್ರಗಳು ಅಮೆರಿಕ, ಫ್ರಾನ್ಸ್, ಜಪಾನ್, ಕೆನಡಾ, ಬ್ರಿಟನ್, ರಷ್ಯಾ ಮತ್ತು ಇಟಲಿ

ಸಿ) 2024ರ ಜಿ-7 ರಾಷ್ಟ್ರಗಳ ಶೃಂಗಸಭೆಯಲ್ಲಿ ಉಕ್ರೇನ್ ದೇಶಕ್ಕೆ 50 ಬಿಲಿಯನ್ ಡಾಲರ್ ಸಾಲ ನೀಡಲು ನಿರ್ಧರಿಸಲಾಯಿತು.

ಡಿ) ಮುಂದಿನ ಜಿ-7 ರಾಷ್ಟ್ರಗಳ 51ನೇ ಶೃಂಗಸಭೆ ಕೆನಡಾ ದೇಶದಲ್ಲಿ ನಡೆಸಲು ಉದ್ದೇಶಿಸಲಾಗಿದೆ.

ಜಿ-7 ರಾಷ್ಟ್ರಗಳು ಅಮೆರಿಕ, ಫ್ರಾನ್ಸ್, ಜಪಾನ್, ಕೆನಡಾ, ಬ್ರಿಟನ್, ಜರ್ಮನಿ ಮತ್ತು ಇಟಲಿ

19. 2024ರ ಐಸಿಸಿ ಪುರುಷರ ಟಿ-20 ವಿಶ್ವಕಪ್ ಕ್ರಿಕೆಟ್‌ಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ.

ಎ) 2024 ಜೂನ್ 1 ರಿಂದ 29ರವರೆಗೆ ಅಮೆರಿಕ ಮತ್ತು ವೆಸ್ಟ್‌ಇಂಡೀಸ್‌ನಲ್ಲಿ 2024ರ ಐಸಿಸಿ ಪುರುಷರ ಟಿ-20 ವಿಶ್ವಕಪ್ ಕ್ರಿಕೆಟ್ ನಡೆಯಿತು.

ಬಿ) 2024ರ ಐಸಿಸಿ ಪುರುಷರ ಟಿ-20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತ ತಂಡವು ದಕ್ಷಿಣ ಆಫ್ರಿಕಾ ದೇಶವನ್ನು ಸೋಲಿಸುವುದರ ಮೂಲಕ ಚಾಂಪಿಯನ್ ಆಯಿತು.

ಸಿ) 2024ರ ಐಸಿಸಿ ಪುರುಷರ ಟಿ-20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿಯನ್ನು ವಿರಾಟ್ ಕೊಹ್ಲಿರವರು ಮತ್ತು ಟೂರ್ನಿ ಶ್ರೇಷ್ಠ ಪ್ರಶಸ್ತಿಯನ್ನು ಜೆಸ್‌ಪ್ರೀತ್ ಬೂಮ್ರಾರವರು ಪಡೆದುಕೊಂಡರು.

ಡಿ) ಮುಂದಿನ 2026ರ ಐಸಿಸಿ ಪುರುಷರ ಟಿ-20 ವಿಶ್ವಕಪ್ ಕ್ರಿಕೆಟ್‌ಅನ್ನು ಬಾಂಗ್ಲಾದೇಶದಲ್ಲಿ ನಡೆಸಲು ಉದ್ದೇಶಿಸಲಾಗಿದೆ.

ಮುಂದಿನ 2026ರ ಐಸಿಸಿ ಪುರುಷರ ಟಿ-20 ವಿಶ್ವಕಪ್ ಕ್ರಿಕೆಟ್‌ಅನ್ನು ಭಾರತ ಮತ್ತು ಶ್ರೀಲಂಕಾ ದೇಶದಲ್ಲಿ ನಡೆಸಲು ಉದ್ದೇಶಿಸಲಾಗಿದೆ.

20. 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ.

ಎ) ಪ್ರತಿವರ್ಷ ಜೂನ್ 21 ಅನ್ನು ಅಂತಾರಾಷ್ಟ್ರೀಯ ಯೋಗದಿನವಾಗಿ ಆಚರಿಸಲಾಗುತ್ತದೆ.

ಬಿ) 2024 ಜೂನ್ 21 ರಂದು ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿರುವ ದಾಲ್ ಸರೋವರದ ಬಳಿ ಶೇರ್–ಇ–ಕಾಶ್ಮೀರ್ ಅಂತಾರಾಷ್ಟ್ರೀಯ ಸಮ್ಮೇಳನ ಕೇಂದ್ರದಲ್ಲಿ Yog For Self and Society ಎಂಬ ಧ್ಯೇಯವಾಕ್ಯದೊಂದಿಗೆ 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಭಾಗವಹಿಸಿದ್ದರು.

ಸಿ) ಮೊದಲ ಅಂತಾರಾಷ್ಟ್ರೀಯ ಯೋಗ ದಿನವನ್ನು 2014 ರಲ್ಲಿ ಆಚರಿಸಲಾಯಿತು

ಡಿ) ಮೊದಲ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ 35,985 ಜನರು ಮತ್ತು 84 ದೇಶಗಳ ಗಣ್ಯರು ಭಾಗವಹಿಸಿದ್ದರು

ಮೊದಲ ಅಂತಾರಾಷ್ಟ್ರೀಯ ಯೋಗ ದಿನವನ್ನು 2015 ರಲ್ಲಿ ಆಚರಿಸಲಾಯಿತು

21. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024 ಮೇ 26ರಂದು ತಮಿಳುನಾಡು ರಾಜ್ಯದ ಚೆನ್ನೈ ನಗರದ ಎಂ.ಎ ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ 2024ರ 17ನೇ ಆವೃತ್ತಿಯ ಐಪಿಎಲ್ ಫೈನಲ್ ಪಂದ್ಯದಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ತಂಡವು ಸನ್ ರೈಸರ್ಸ್ ಹೈದ್ರಾಬಾದ್ ತಂಡವನ್ನು 8 ವಿಕೆಟ್‌ಗಳಿಂದ ಸೋಲಿಸಿ ಚಾಂಪಿಯನ್‌ಶಿಪ್ ಅನ್ನು ಪಡೆದುಕೊಂಡಿತು.

2) 2024ರ 17ನೇ ಆವೃತ್ತಿಯ ಐಪಿಎಲ್ ಪಂದ್ಯದಲ್ಲಿ ಒಟ್ಟು 741 ರನ್‌ಗಳನ್ನು ಗಳಿಸುವ ಮೂಲಕ ಆರ್‌ಸಿಬಿ ತಂಡದ ವಿರಾಟ್ ಕೂಹ್ಲಿರವರಿಗೆ ಆರೆಂಜ್ ಕ್ಯಾಪ್‌ಅನ್ನು ನೀಡಲಾಯಿತು ಮತ್ತು ಒಟ್ಟು 24 ವಿಕೆಟ್‌ಗಳನ್ನು ಪಡೆದ ಪಂಜಾಬ್ ತಂಡದ ಹರ್ಷಲ್ ಪಟೇಲ್‌ರವರಿಗೆ ಪರ್ಪಲ್ ಕ್ಯಾಪ್‌ಅನ್ನು ನೀಡಲಾಯಿತು.

3) IPL - Indian Premier League.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮತ್ತು 3 ಸರಿಯಾಗಿವೆ.
ಸಿ) 1 ಮತ್ತು 3 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

22. 2024ರ ಪ್ರಯಾಣ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ ?

ಎ) 63ನೇ ಸ್ಥಾನ

ಬಿ) 64ನೇ ಸ್ಥಾನ

ಸಿ) 39ನೇ ಸ್ಥಾನ

ಡಿ) 91ನೇ ಸ್ಥಾನ

23. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2023ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಲಕ್ಷ್ಮೀಶ ತೋಳ್ಪಾಡಿರವರ ಕೃತಿ ಮಹಾಭಾರತ ಅನುಸಂಧಾನದ ಭಾರತಯಾತ್ರೆ ಕೃತಿಗೆ ನೀಡಲಾಗಿದೆ. ಈ ಪ್ರಶಸ್ತಿಯು 1 ಲಕ್ಷ ರೂ. ನಗದನ್ನು ಒಳಗೊಂಡಿರುತ್ತದೆ.

2) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಮೊದಲ ಬಾರಿಗೆ 1955ರಲ್ಲಿ ರಾಷ್ಟ್ರಕವಿ ಕುವೆಂಪುರವರ ಬರೆದ ಶ್ರೀ ರಾಮಾಯಣ ದರ್ಶನಂ ಪುಸ್ತಕಕ್ಕೆ ನೀಡಲಾಗಿದೆ.

3) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಒಟ್ಟು 24 ಭಾಷೆಗಳಿಗೆ ನೀಡಲಾಗುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

24. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024 ಜನವರಿ 26ರ 75ನೇ ಗಣರಾಜ್ಯೋತ್ಸವದ ಮುಖ್ಯ ಅತಿಥಿಗಳಾಗಿ ಫ್ರಾನ್ಸ್ ದೇಶದ ಅಧ್ಯಕ್ಷರಾದ ಇಮ್ಯಾನುಯೆಲ್ ಮ್ಯಾಕ್ರನ್‌ರವರು ಆಗಮಿಸಿದ್ದರು.

2) 2024 ಜನವರಿ 26ರ 75ನೇ ಗಣರಾಜ್ಯೋತ್ಸವದ ಸಮಾರಂಭದಲ್ಲಿ ಮೊದಲ ಸ್ಥಾನ ಪಡೆದ ಸ್ತಬ್ಧಚಿತ್ರ ಒಡಿಶಾ ರಾಜ್ಯಕ್ಕೆ ಸಂಬಂಧಿಸಿದ್ದು.

3) 2024 ಜನವರಿ 26ರ 75ನೇ ಗಣರಾಜ್ಯೋತ್ಸವದಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಒಟ್ಟು 20 ಸ್ತಬ್ಧಚಿತ್ರಗಳು ಪ್ರದರ್ಶನಗೊಂಡಿದ್ದವು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

2024 ಜನವರಿ 26ರ 75ನೇ ಗಣರಾಜ್ಯೋತ್ಸವದಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಒಟ್ಟು 16 ಸ್ತಬ್ಧಚಿತ್ರಗಳು ಪ್ರದರ್ಶನಗೊಂಡಿದ್ದವು.



25. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024ರ ಪದ್ಮವಿಭೂಷಣ ಪ್ರಶಸ್ತಿಯನ್ನು ಕೆ.ಚಿರಂಜೀವಿ, ಎಂ.ವೆಂಕಯ್ಯನಾಯ್ಡು, ವೈಜಯಂತಿ ಮಾಲಾ ಬಾಲಿ, ಬಿಂದೇಶ್ವರ ಪಾಠಕ್, ಪದ್ಮ ಸುಬ್ರಹ್ಮಣ್ಯಂರವರಿಗೆ ನೀಡಲಾಗಿದೆ.

2) 2024ರ ಪದ್ಮಶ್ರೀ ಪ್ರಶಸ್ತಿಯನ್ನು ಪಡೆದ ಕನ್ನಡಿಗರು ರೋಹನ್ ಬೋಪಣ್ಣ, ಡಾ॥ ಸಿ.ಆರ್ ಚಂದ್ರಶೇಖರ್, ಶಶಿ ಸೋನಿ, ಪ್ರೇಮಾ ಧನರಾಜ್, ಅನುಪಮಾ ಹೊಸಕೆರೆ, ಸೋಮಣ್ಣ, ಎಂ.ಕೆ ಶ್ರೀಧರ್, ಕೆ.ಎಸ್ ರಾಜಣ್ಣ.

3) 2024ರ ಪದ್ಮವಿಭೂಷಣ ಪ್ರಶಸ್ತಿಯನ್ನು 5 ಜನ ಗಣ್ಯರಿಗೆ, ಪದ್ಮಭೂಷಣ ಪ್ರಶಸ್ತಿಯನ್ನು 17 ಜನ ಗಣ್ಯರಿಗೆ ಮತ್ತು ಪದ್ಮಶ್ರೀ ಪ್ರಶಸ್ತಿಯನ್ನು 110 ಜನ ಗಣ್ಯರಿಗೆ ನೀಡಲಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿದೆ.

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

26. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2023ನೇ ಸಾಲಿನ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿಯನ್ನು ಬ್ಯಾಡ್ಮಿಂಟನ್ ಆಟಗಾರರಾದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿರವರಿಗೆ ನೀಡಲಾಗಿದೆ.

2) ಭಾರತದ ಕ್ರೀಡಾಕ್ಷೇತ್ರದ ಅತ್ಯುನ್ನತ ಪ್ರಶಸ್ತಿ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿಯಾಗಿದೆ ಮತ್ತು ಭಾರತದ ಕ್ರೀಡಾಕ್ಷೇತ್ರದ ಎರಡನೇ ಅತ್ಯುನ್ನತ ಪ್ರಶಸ್ತಿ ಅರ್ಜುನ ಪ್ರಶಸ್ತಿಯಾಗಿದೆ.

3) ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿಯ ಮೊತ್ತ 20 ಲಕ್ಷ ರೂ.ಗಳು ಮತ್ತು ಅರ್ಜುನ ಪ್ರಶಸ್ತಿಯ ಮೊತ್ತ 10 ಲಕ್ಷ ರೂ.ಗಳು

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿಯ ಮೊತ್ತ 25 ಲಕ್ಷ ರೂ.ಗಳು ಮತ್ತು ಅರ್ಜುನ ಪ್ರಶಸ್ತಿಯ ಮೊತ್ತ 15 ಲಕ್ಷ ರೂ.ಗಳು

27. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024ರ ಆಸ್ಟ್ರೇಲಿಯನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಇಟಲಿಯ ಜನ್ನಿಕ್ ಸಿನ್ನರ್‌ರವರುರಷ್ಯಾದ ಡೆನಿಲ್ ಮೆಡ್ವೆಡೇವ್‌ರವರನ್ನು ಸೋಲಿಸಿ ಪ್ರಶಸ್ತಿಯನ್ನು ಪಡೆದುಕೊಂಡರು.

2) 2024ರ ಆಸ್ಟ್ರೇಲಿಯನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಬೆಲಾರಸ್ ದೇಶದ ಅರಿನಾ ಸಬಲೆಂಕಾರವರು ಚೀನಾದ ಝೆಂಗ್ ಕ್ವಿನ್‌ವೆನ್‌ರವರನ್ನು ಸೋಲಿಸಿ ಪ್ರಶಸ್ತಿಯನ್ನು ಪಡೆದುಕೊಂಡರು.

3) 2024ರ ಆಸ್ಟ್ರೇಲಿಯನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್‌ರವರು ಇಟಲಿಯ ಸಿಮೋನೆ ಬೊಲೆಲ್ಲಿ ಮತ್ತು ಆಂಡ್ರಿಯಾ ವವಸ್ಸೋರಿರವರನ್ನು ಸೋಲಿಸಿ ಪ್ರಶಸ್ತಿಯನ್ನು ಪಡೆದುಕೊಂಡರು

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

28. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024ರ ಫ್ರೆಂಚ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್‌ರವರು ಜರ್ಮನಿಯ ಅಲೆಕ್ಸಾಂಡರ್ ಜ್ವೆರೇವ್‌ರವರನ್ನು ಸೋಲಿಸಿ ಪ್ರಶಸ್ತಿಯನ್ನು ಪಡೆದುಕೊಂಡರು

2) 2024ರ ಫ್ರೆಂಚ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಪೋಲೆಂಡ್‌ನ ಇಗಾ ಸ್ವಿಯಾಟೆಕ್‌ರವರು ಇಟಲಿ ದೇಶದ ಜಾಸ್ಮಿನ್ ಪಾವೊಲಿನಿರವರನ್ನು ಸೋಲಿಸಿ ಪ್ರಶಸ್ತಿಯನ್ನು ಪಡೆದುಕೊಂಡರು

3) 2024ರ ಫ್ರೆಂಚ್ ಓಪನ್ ಟೆನ್ನಿಸ್ ಟೂರ್ನಿಯು 126ನೇ ಆವೃತ್ತಿಯಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

2024ರ ಫ್ರೆಂಚ್ ಓಪನ್ ಟೆನ್ನಿಸ್ ಟೂರ್ನಿಯು 123ನೇ ಆವೃತ್ತಿಯಾಗಿದೆ.

29. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024ರ ವಿಂಬಲ್ಡನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್‌ರವರು ಸರ್ಬಿಯಾದ ನೊವಾಕ್ ಜೊಕೊವಿಚ್‌ರವರನ್ನು ಸೋಲಿಸಿ ಪ್ರಶಸ್ತಿಯನ್ನು ಪಡೆದುಕೊಂಡರು.

2) 2024ರ ವಿಂಬಲ್ಡನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಜೆಕ್ ಗಣರಾಜ್ಯದ ಬಾರ್ಬೋರಾ ಕ್ರೆಜಿಕೋವಾರವರು ಇಟಲಿ ದೇಶದ ಜಾಸ್ಮಿನ್ ಪಾವೊಲಿನಿರವರನ್ನು ಸೋಲಿಸಿ ಪ್ರಶಸ್ತಿಯನ್ನು ಪಡೆದುಕೊಂಡರು.

3) ವಿಂಬಲ್ಡನ್ ಓಪನ್ ಟೆನ್ನಿಸ್ ಟೂರ್ನಿ ವರ್ಷದ ನಾಲ್ಕು ಗ್ರ್ಯಾಂಡ್‌ಸ್ಲ್ಯಾಂಗಳಲ್ಲಿ ಅತ್ಯಂತ ಹಳೆಯದಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

30. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) ಪ್ರಸಿದ್ಧ ಜೀವರಸಾಯನ ವಿಜ್ಞಾನಿ ಭಾರತೀಯ ವಿಜ್ಞಾನ ಸಂಸ್ಥೆಯ ಮಾಜಿ ನಿರ್ದೇಶಕ ಜಿ. ಪದ್ಮನಾಭನ್‌ರವರನ್ನು ಕೇಂದ್ರ ಸರ್ಕಾರವು ಚೊಚ್ಚಲ "ವಿಜ್ಞಾನ ರತ್ನ" ಪ್ರಶಸ್ತಿಗೆ ಆಯ್ಕೆ ಮಾಡಿದೆ. ಜಿ. ಪದ್ಮನಾಭನ್‌ರವರು ಮಲೇರಿಯಾಕ್ಕೆ ಸಂಬಂಧಿಸಿದಂತೆ ನಡೆಸಿದ ಸಂಶೋಧನೆಯಿಂದ ಪ್ರಸಿದ್ಧಿ ಗಳಿಸಿದ್ದಾರೆ. ಇವರು ಪದ್ಮಭೂಷಣ, ಪದ್ಮಶ್ರೀ ಪ್ರಶಸ್ತಿಗಳನ್ನು ಸಹ ಪಡೆದಿದ್ದಾರೆ.

2) ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಕೇಂದ್ರ ಸರ್ಕಾರ ಪ್ರತಿ ವರ್ಷ ನೀಡುವ 33ರಾಷ್ಟ್ರೀಯ ವಿಜ್ಞಾನ ಪುರಸ್ಕಾರಗಳಲ್ಲಿ ವಿಜ್ಞಾನ ರತ್ನ ಪ್ರಶಸ್ತಿಯು ಒಂದು.

3) ವಿಜ್ಞಾನ ರತ್ನ ಪ್ರಶಸ್ತಿ ಅಲ್ಲದೇ ಈ ಬಾರಿ 13 "ವಿಜ್ಞಾನ ಶ್ರೀ" ಮತ್ತು 18 "ವಿಜ್ಞಾನ ಯುವ" ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. "ವಿಜ್ಞಾನ ಶ್ರೀ" ಪಡೆದ 13 ಮಂದಿಯಲ್ಲಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆ್ಯಸ್ಟ್ರೋಫಿಸಿಕ್ಸ್‌ನ ನಿರ್ದೇಶಕರಾದ ಅನ್ನಪೂರ್ಣಿ ಸುಬ್ರಮಣ್ಯಂ ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಉಮೇಶ್ ವಾಷ್ಣೇಯ್‌ರವರು ಸೇರಿದ್ದಾರೆ. ಇಸ್ರೋದ ಚಂದ್ರಯಾನ –3 ತಂಡಕ್ಕೆ "ಟೀಂ ವಿಜ್ಞಾನ" ಪ್ರಶಸ್ತಿ ನೀಡಲಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

31. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024 ಜುಲೈ 20 ರಂದು ಭಾರತದ ಪ್ರಸಿದ್ಧ ಟೆನ್ನಿಸ್ ಆಟಗಾರರಾದ ಲಿಯಾಂಡರ್ ಪೇಸ್ ಮತ್ತು ವಿಜಯ್ ಅಮೃತ್ ರಾಜ್‌ರವರನ್ನು ಟೆನ್ನಿಸ್ ಹಾಲ್ ಆಫ್ ಫೇಮ್‌ಗೆ ಅಧಿಕೃತವಾಗಿ ಸೇರ್ಪಡೆಗೊಳಿಸಲಾಗಿದೆ.

2) ಭಾರತದ ಪ್ರಸಿದ್ಧ ಟೆನ್ನಿಸ್ ಆಟಗಾರರಾದ ಲಿಯಾಂಡರ್ ಪೇಸ್ ಮತ್ತು ವಿಜಯ್ ಅಮೃತ್ ರಾಜ್‌ರವರು ಹಾಲ್ ಆಫ್ ಫೇಮ್‌ಗೆ ಸೇರ್ಪಡೆಯಾದ ಏಷ್ಯಾದ ಮೊದಲಿಗರು.

3) ಇಂಟರ್‌ನ್ಯಾಷನಲ್ ಟೆನ್ನಿಸ್ ಹಾಲ್ ಆಫ್ ಫೇಮ್ ಫ್ರಾನ್ಸ್ ದೇಶದ ಪ್ಯಾರಿಸ್‌ನಲ್ಲಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

ಇಂಟರ್‌ನ್ಯಾಷನಲ್ ಟೆನ್ನಿಸ್ ಹಾಲ್ ಆಫ್ ಫೇಮ್ ಅಮೆರಿಕದ ರೋಡೆ ಐಲ್ಯಾಂಡ್‌ನ ನ್ಯೂಪೋರ್ಟ್‌ನಲ್ಲಿದೆ.

32. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024 ಆಗಸ್ಟ್ 10 ರಂದು ಫ್ರಾನ್ಸ್ ದೇಶದ ಪ್ಯಾರಿಸ್‌ನಲ್ಲಿ ನಡೆದ 142ನೇ ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ಅಧಿವೇಶನದಲ್ಲಿ 2008ರಲ್ಲಿ ನಡೆದ ಬೀಜಿಂಗ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಶೂಟಿಂಗ್ ವಿಭಾಗದಲ್ಲಿ ಚಿನ್ನದ ಪದಕ ಪಡೆದ ಭಾರತದ ಅಭಿನವ್ ಬಿಂದ್ರಾರವರಿಗೆ ಒಲಂಪಿಕ್ ಆರ್ಡರ್ ಗೌರವ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು.

2) ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ಕೇಂದ್ರ ಕಚೇರಿ ಸ್ವಿಟ್ಜರ್‌ಲ್ಯಾಂಡ್ ದೇಶದ ಲಾಸನ್ನೆ ನಗರದಲ್ಲಿದೆ.

3) ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ಅಧ್ಯಕ್ಷರಾಗಿ ಥಾಮಸ್ ಭಾಕ್‌ರವರು ಕರ್ತವ್ಯನಿರ್ವಹಿಸುತ್ತಿದ್ದಾರೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

ಸಾಧನೆಯ ಹಾದಿಗೊಂದು ಹೊತ್ತಿಗೆ

General Studies

2024 12ನೇ ಪರಿಷ್ಕೃತ ಆವೃತ್ತಿ

NCERT-DSERT ನೂತನ ಪಠ್ಯಕ್ರಮ, APPS/WEB INFORMATION ನ ಪ್ರಚಲಿತ ಮಾಹಿತಿ
KSP, KPSC, KEA, UPSC ಪ್ರಶ್ನೆಪತ್ರಿಕೆಗಳ ಅನ್ವಯ ಪರಿಷ್ಕರಿಸಿ ರಚಿಸಲಾಗಿದೆ

ಭಾರತದಲ್ಲಿರುವ ರಾಜ್ಯಗಳು ವಿಶೇಷವಾಗಿ

ಕರ್ನಾಟಕ

ಪುಸ್ತಕದ ವಿಶೇಷತೆಗಳು

- ಭಾರತದ 28 ರಾಜ್ಯಗಳ ಮಾಹಿತಿ
- ಭಾರತದ 8 ಕೇಂದ್ರಾಡಳಿತ ಪ್ರದೇಶಗಳು
- ಕರ್ನಾಟಕದ 31 ಜಿಲ್ಲೆಗಳ ಮಾಹಿತಿ
- ಸಾಮಾನ್ಯ ಅಧ್ಯಯನದ ವಿಷಯಗಳು
- ಭಾರತದ ಸಂವಿಧಾನ
- ಭಾರತದ ಇತಿಹಾಸ
- ಭಾರತದ ಭೂಗೋಳ
- ಸಾಮಾನ್ಯ ಅರ್ಥಶಾಸ್ತ್ರ
- ಸಾಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ
- ಕಂಪ್ಯೂಟರ್ ಮತ್ತು ಪೊಲೀಸ್ ಇಲಾಖೆ
- ಯುನೆಸ್ಕೋ ಪಟ್ಟಿ, ರಾಮ್ಸರ್ ತಾಣಗಳು
- ಪ್ರಶಸ್ತಿಗಳು ಮತ್ತು ಕ್ರೀಡಾಕೂಟಗಳು
- ಪ್ರಮುಖ ಮಿಲಿಟರಿ ಸಮರಾಭ್ಯಾಸಗಳು
- ಕರ್ನಾಟಕ ಬಜೆಟ್-2024-25

ಕರ್ನಾಟಕದ ಅತ್ಯುತ್ತಮ GK ಪುಸ್ತಕ

KAS | PDO | VAO | PSI | FDA | SDA | TET | GROUP-C | POLICE

YouTube @HussainappaNayakaAcademy ಹುಸೇನಪ್ಪ ನಾಯಕ

ಹುಸೇನಪ್ಪ ನಾಯಕ • ಪ್ರಚಲಿತ ಘಟನೆಗಳ ಸಮಗ್ರ ಅಧ್ಯಯನ

thanks
FOR WATCHING